೧. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :–

ವಿಷಯ : ಇತರೆ ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಮೀಸಲಾತಿಗೆ ಉಚ್ಚನ್ಯಾಯಾಲಯ ತಡೆ ಆಜ್ಞೆ ಕುರಿತು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೋತ್ತರವನ್ನು ಬದಿಗಿಟ್ಟು ಇತ್ತೀಚಿನ ದಿವಸಗಳಲ್ಲಿ Supreme Court reservation ಬಗ್ಗೆ ಏನು ತೀರ್ಮಾನ ಕೊಟ್ಟಿದೆ...

ಅಧ್ಯಕ್ಷರು : There is no... ದಯಮಾಡಿ ಕೇಳಿ, ವಿರೋಧ ಪಕ್ಷದ ನಾಯಕರಾಗಿ ಹೀಗೆ ಮಾತನಾಡಿದರೆ ಹೇಗೆ? ನೀವು adjournment motion ನ್ನೇನೂ ಕೊಟ್ಟಿಲ್ಲ. ಸುಮ್ಮನೆ ಎದ್ದುನಿಂತುಕೊಂಡು, ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ, ಅದು important ಇದು important ಎಂದರೆ ಹೇಗೆ?

ಶ್ರೀ ಧರ್ಮಸಿಂಗ್ : ಕರ್ನಾಟಕ ವಿಧಾನಸಭೆಯ ನಡವಳಿಕೆಯ ನಿಯಮ ೧೪೬ ರ ಪ್ರಕಾರ urgent public importance ಬಗ್ಗೆ,

ಅಧ್ಯಕ್ಷರು : ನೀವು ವಿರೋಧ ಪಕ್ಷದ ನಾಯಕರು, ಹೀಗೆ ಮಾಡಿದರೆ ಹೇಗೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಆಂಧ್ರಪ್ರದೇಶ ದ Assembly ಯಲ್ಲಿ ...

ಅಧ್ಯಕ್ಷರು : Adjournment motion notice ಕಳುಹಿಸಿದ್ದರೆ, I would have allowed you to speak.

ಶ್ರೀ ಧರ್ಮಸಿಂಗ್ : ಇದು ರಾಜ್ಯದ ಜನರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ, ಶೋಷಿತ ವರ್ಗಕ್ಕೆ ಸಂಬಂಧಪಟ್ಟದ್ದು.....

ಅಧ್ಯಕ್ಷರು : No, No, ಇದಕ್ಕೆ ಅವಕಾಶ ಇಲ್ಲ.

ಶ್ರೀ ಧರ್ಮಸಿಂಗ್ : ಇದರ ಬಗ್ಗೆ ಇವತ್ತು Central Government ಗೆ ಸಹಾಯ ಆಗತಕ್ಕಂಥ.....

ಅಧ್ಯಕ್ಷರು : ನಿಯಮಗಳ ಪ್ರಕಾರ ಬೇರೆ ಕಲಾಪಗಳನ್ನು ಮುಂದಕ್ಕೆ ಹಾಕಬೇಕಾದರೆ adjournment motion notice ಕೊಡಬೇಕಾಗಿತ್ತು.

ಶ್ರೀ ಧರ್ಮಸಿಂಗ್ : Supreme Court ನಲ್ಲಿ ವಾದ ಮಾಡಬೇಕೆಂಬ ರೀತಿಯಲ್ಲಿ adjournment motion move ಮಾಡುತ್ತಿದ್ದೇವೆ. ಅದರ ಬಗ್ಗೆ ಚರ್ಚೆ ಆಗಲೇಬೇಕಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕೇಳಿ. ಅದರ ಬಗ್ಗೆ ಚರ್ಚೆ ಆಗಬೇಕಾದರೆ ಯಾವ ನಿಯಮದ ಕೆಳಗಡೆ ಚರ್ಚೆ ಮಾಡಬೇಕೆಂದು ಕೊಡಿ. ಅದಕ್ಕೇನು ? ಚರ್ಚೆ ಮಾಡುವುದಕ್ಕೆ ಅವಕಾಶ ಕೊಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಯಮ ೧೪೬ ರ ಕೆಳಗೆ ಒಂದು resolution ಅನ್ನು ನಾವು move ಮಾಡುತ್ತಿದ್ದೇವೆ. ತಮಗೆ ಅದರ ಒಂದು ಕಾಪಿಯನ್ನು ಸಹ ಕಳುಹಿಸಿದ್ದೇವೆ.

ಅಧ್ಯಕ್ಷರು : ಇಲ್ಲ, ಬಂದಿಲ್ಲ.

ಶ್ರೀ ಧರ್ಮಸಿಂಗ್ : ಕಳುಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು : ನಮಗೇನೂ ಇನ್ನೂ ಬಂದಿಲ್ಲ. ನಮ್ಮ office ಗೆ ಕೊಟ್ಟರೆ ತಾನೆ ಬರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದೇಕೆ urgent ಎಂದರೆ, ಇದೇ ರೀತಿಯಾಗಿ ಆಂಧ್ರಪ್ರದೇಶದವರು, ತಮಿಳುನಾಡಿನವರು ಕೂಡ ಒಂದು resolution ಮಾಡಿದ್ದಾರೆ. Recent Supreme Court Judgement ನಿಂದಾಗಿ ಬಹುತೇಕವಾಗಿ other Backward Classes ನವರಿಗೆ ಏನು ತೊಂದರೆಯಾಗುತ್ತಿದೆ, ಅದಕ್ಕೆ to strengthen the Reservation Policy ನಮ್ಮ House ನಿಂದಲೂ ಕೂಡ

ಒಂದು resolution ಹೋದರೆ ಈಗ ಕೊಟ್ಟಿರುವಂಥದ್ದಕ್ಕೆ protection ಕೊಡುವುದಕ್ಕೆ ಅನುಕೂಲವಾಗುತ್ತದೆ. Government of India ಗೂ ಒಂದು support ಸಿಗುತ್ತದೆ. ಎಲ್ಲಾ ರಾಜ್ಯಗಳು ನಮಗೆ ಸಹಾಯ ಮಾಡುತ್ತಿವೆ ಎನ್ನತಕ್ಕಂಥದ್ದಲ್ಲ. Reservation ವಿರುದ್ಧವಾಗಿ ಮಾತನಾಡತಕ್ಕಂಥವರಿಗೂ ಸ್ವಲ್ಪ ತಡೆಹಿಡಿದ ಹಾಗೆ ಆಗುತ್ತದೆ. ಏಕೆಂದರೆ, ಇಡೀ ರಾಜ್ಯ, ದೇಶದಲ್ಲಿ ಈ OBC ಪರವಾಗಿರುವ ನಾವು resolution ಮಾಡದೇ ಇರುವುದು ಸರಿಯಿಲ್ಲವೆನ್ನುವ ಭಾವನೆ ಕೂಡ ಬರುತ್ತದೆ. ಅದಕ್ಕೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ....

ಅಧ್ಯಕ್ಷರು : ನೀವು ಯಾವುದೋ ಒಂದು ಕೊಟ್ಟಿದ್ದೇನೆಂದು ಹೇಳುತ್ತೀರಿ. ಅದು ಬರಲಿ. (ಗೊಂದಲ) ಇಂಥ ಪರಿಸ್ಥಿತಿಯಲ್ಲಿ ಸದನ ನಡೆಸುವುದಕ್ಕೆ ಸಾಧ್ಯವಿಲ್ಲ. (ಗೊಂದಲ) Notice ಕೊಟ್ಟಿದ್ದೇವೆಂದು ಹೇಳುತ್ತಾರೆ. ನಮಗೆ ಇನ್ನೂ ತಲುಪಿಲ್ಲ. Notice ಬರಲಿ ಮೊದಲು ಪ್ರಶ್ನೋತ್ತರ ಆಗಲಿ. ಆನಂತರ ಅವಕಾಶ ಕೊಡುತ್ತೇನೆ. ಸುಮ್ಮನೆ ಎದ್ದು ನಿಂತುಕೊಂಡು ಈ ರೀತಿ ಮಾಡಿದರೆ ಸರಿಯಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : Notice ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದು ನಮ್ಮ ಕೈ ತಲುಪಿಲ್ಲ. Notice ಬರಲಿ, ಮೊದಲು ಪ್ರಶ್ನೋತ್ತರವಾಗಲಿ. ಅನಂತರ ತೆಗೆದುಕೊಳ್ಳೋಣ. ನಾನು ಅವಕಾಶ ಕೊಡುತ್ತೇನೆ. (ಗೊಂದಲ) ಸುಮ್ಮ ಸುಮ್ಮನೆ ಎದ್ದು ನಿಂತುಕೊಂಡು ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಒಂದು ನಿರ್ಣಯವನ್ನು ಸರ್ಕಾರದವರೇ ಮಂಡಿಸಲಿ. ಸರ್ಕಾರವೇ ನಿರ್ಣಯ ಮಂಡಿಸುವುದರಿಂದ ಅದಕ್ಕೊಂದು ಶಕ್ತಿ ಬರುತ್ತದೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ, ಕೇಳಿ, (ಗೊಂದಲ) ವಾಟಾಳ್ ನಾಗರಾಜ್‌ರವರೇ ಶಕ್ತಿ ಬರುವುದಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಯಾರು ಬೇಕಾದರೂ ನಿರ್ಣಯ ಮಂಡಿಸಲಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಸಚಿವರು) : ಮಲ್ಲಿಕಾರ್ಜುನ ಖರ್ಗೆಯವರೇ ಯಾವುದೇ ನಿಯಮಗಳು.....

ಶ್ರೀ ಮಲ್ಲಿಕಾರ್ಜುನ ಖರ್ಗೆ : I request him to suspend the Rules and take it up.

ಶ್ರೀ ಎಂ.ಪಿ. ಪ್ರಕಾಶ್ : ನಿಯಮಾವಳಿಗಳ ಪ್ರಕಾರ ತಾವು ಮೊದಲು ನಿಮಗೆ notice ಅನ್ನು ಕೊಡಬೇಕು. ೭ ದಿವಸಗಳ ಮುಂಚಿತವಾಗಿರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ೭ ದಿವಸ ಇಲ್ಲವಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ. ಆ ನಿರ್ಣಯದಲ್ಲಿ ಅನೇಕ ಷರತ್ತುಗಳಿವೆ. ಆ ಷರತ್ತುಗಳಿಗನುಗುಣವಾಗಿರುವಂಥ, ತಾವು ಕಳುಹಿಸುವಂಥ ನಿರ್ಣಯವನ್ನು ನೋಡಿದ ಮೇಲೆ ಇದು ಸಾಧ್ಯವಾದುದು, ಮತ್ತು ನಮ್ಮ ನಿಯಮಾವಳಿಗಳಿಗನುಗುಣವಾಗಿದೆ ಎಂದು ಹೇಳಿದಾಗ, ಈ ನಿಯಮಾವಳಿಗಳಿಗೆ ಇಂಥ ಒಂದು ಸಾಧಕ ಬಾಧಕ ಇರುವುದರಿಂದ, ತಾವು ಎಲ್ಲಾ ನಿಯಮಾವಳಿಗಳನ್ನು ಬದಿಗೊತ್ತಿ ಇದನ್ನು ತೆಗೆದುಕೊಳ್ಳಿ ಎಂದು ಪ್ರಸ್ತಾಪ ಮಾಡಬಹುದು. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ೧೪೬ರ ಪ್ರಕಾರ,

"ಒಂದು ನಿರ್ಣಯವನ್ನು ಮಂಡಿಸಲು ಇಷ್ಟಪಟ್ಟಿರುವ ಮಂತ್ರಿಗಳಲ್ಲದ ಒಬ್ಬರು ಬ್ಯಾಲೆಟ್ ದಿನಾಂಕಕ್ಕೆ ಕನಿಷ್ಟ ಪೂರ್ತಿ ಏಳು ದಿನಗಳಿಗೆ ಮುಂಚೆ ತಮ್ಮ ಉದ್ದೇಶವನ್ನು ಕುರಿತು ಸೂಚನೆ ಕಳುಹಿಸಬೇಕು ಮತ್ತು ಅವರು ಸೂಚಿಸಲು ಇಷ್ಟಪಟ್ಟಿರುವ ನಿರ್ಣಯದ ವಿಷಯವನ್ನು ಆ ಪತ್ರದೊಂದಿಗೆ ಒಪ್ಪಿಸಬೇಕು."

೭ ದಿನವಸ ಇಲ್ಲವಲ್ಲ ಆ ಕಾರಣಕ್ಕಾಗಿ, ಅದನ್ನು ಬದಿಗಿಡಿ ಎಂದು ಹೇಳುತ್ತಾರೆ, ನಿರ್ಣಯದ ವಿಷಯ ಮತ್ತು ಅದನ್ನು ಅಂಗೀಕರಿಸಲು ಷರತ್ತುಗಳು ಇದರ ಪ್ರಕಾರ,

" ಈ ನಿಯಮಗಳ ಉಪಬಂಧಗಳಿಗೊಳಪಟ್ಟ ಒಬ್ಬ ಸದಸ್ಯರು ಅಥವಾ ಒಬ್ಬ ಮಂತ್ರಿಗಳು ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ಯಾವುದೇ ವಿಷಯದಲ್ಲಿ ಒಂದು ನಿರ್ಣಯವನ್ನು ಮಂಡಿಸಬಹುದು. ಒಂದು ನಿರ್ಣಯವನ್ನು ಅಂಗೀಕರಿಸಲು ಅದು ಈ ಕೆಳಕಂಡ ಷರತ್ತುಗಳನ್ನು ಪೂರ್ತಿಗೊಳಿಸಬೇಕು. ಅವು ಯಾವುವೆಂದರೆ."

(i) ನಿರ್ಣಯವನ್ನು ಸ್ಪಷ್ಟವಾಗಿ ಮತ್ತು ನಿಷ್ಕೃಷ್ಟವಾಗಿ ವ್ಯಕ್ತಪಡಿಸಿರಬೇಕು ಮತ್ತು ನಿರ್ಣಯವು ಮುಖ್ಯವಾಗಿ ಒಂದು ನಿರ್ದಿಷ್ಟ ಅಂಶವನ್ನು ಕುರಿತುದಾಗಿರಬೇಕು.

(ii) ನಿರ್ಣಯದಲ್ಲಿ ಚರ್ಚೆಗಳು, ಅನುಮಿತ ನಿರ್ಧಾರಗಳು, ವ್ಯಂಗ್ಯ ಮಾತುಗಳೂ, ಆಪಾದನೆಗಳು ಅಥವಾ ಮಾನನಷ್ಟದ ಹೇಳಿಕೆಗಳು ಇವೇ ಮುಂತಾದವು ಇರಕೂಡದು.

(iii) ಅದರಲ್ಲಿ ವ್ಯಕ್ತಿಗಳ ಸರ್ಕಾರಿ ಕೆಲಸಕ್ಕೆ ಅಥವಾ ಅವರ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಮಟ್ಟಿಗೆ ಹೊರತು, ಅವರ ನಡತೆಯ ಅಥವಾ ಅವರ ಶೀಲಸ್ವಭಾವಗಳ ವಿಚಾರವಾಗಿಯಾಗಲಿ ಪ್ರಸ್ತಾವವಿರಕೂಡದು.

(iv) ಭಾರತದ ಯಾವುದಾದರೂ ಭಾಗದಲ್ಲಿ ಅಧಿಕಾರ ವ್ಯಾಪ್ತಿ ಇರುವ ನ್ಯಾಯಾಲಯದವರ ನ್ಯಾಯ ನಿರ್ಣಯಕ್ಕೆ ಒಳಪಟ್ಟಿರುವ ಯಾವ ವಿಷಯಕ್ಕೂ ಅದು ಸಂಬಂಧಪಟ್ಟಿರಕೂಡದು."

ಶ್ರೀ ಸಿದ್ದರಾಮಯ್ಯ : ಆ ನಿಯಮಾವಳಿಗಳೆಲ್ಲ ಇವೆ.

ಶ್ರೀ ಎಂ.ಪಿ.ಪ್ರಕಾಶ್ : ಆದ್ದರಿಂದ, ಆ ನಿರ್ಣಯವನ್ನು ಅವರು ಇಲ್ಲಿ ಮಂಡಿಸಲಿ.

ಶ್ರೀ ಸಿದ್ದರಾಮಯ್ಯ : ಕೊಟ್ಟಿದೆ. ಮಂಡಿಸಲಿಕ್ಕೇ ಅನುಮತಿ ಕೇಳುತ್ತಿರುವುದು.

ಶ್ರೀ ಎಂ.ಪಿ. ಪ್ರಕಾಶ್ : ಮಂಡಿಸಿದ ಕಾಪಿಯನ್ನು ನಮಗೆ ಕೊಡಬೇಕು. ಸದಸ್ಯರು ಕನಿಷ್ಟ ಪಕ್ಷ ..... ಕೊಡಬೇಕು. ನಾವು ಅದರೊಳಗೆ ಆಕ್ಷೇಪಣಾರ್ಹವಾದಂಥ ವಿಷಯಗಳು ಈ ಷರತ್ತಿಗೊಳಪಟ್ಟಿಲ್ಲವೆಂದ ಮೇಲೆ, ಸಮಯದ ಅಭಾವವಾಗಿರುವುದರಿಂದ ಚರ್ಚೆ ಮಾಡಬೇಕಾದಂಥ ಮಹತ್ವವಿದೆ ಎಂದಾಗ ಮಾನ್ಯ ವಿರೋಧ ಪಕ್ಷದ ನಾಯಕರಾಗಲಿ ಅಥವಾ motion ಕೊಟ್ಟಿರುವ ವ್ಯಕ್ತಿಗಳು ಎಲ್ಲ ನಿಯಮಾವಳಿಗಳನ್ನು ಬದಿಗೊತ್ತಿ ಇದು ಬಹಳ ಮಹತ್ವವಾದಂಥ ಸಂಗತಿ, ಇದನ್ನು ಕೈಗೆತ್ತಿಕೊಳ್ಳಿ ಎಂದು ಹೇಳಬಹುದು. ಆಗ ಸರ್ಕಾರದವರು ಒಪ್ಪಿಗೆ ಕೊಡುತ್ತೇವೆ. ಅದನ್ನು ನಮಗೆ ಕೊಡಿ. ಈಗ ನಮಗೆ ಅದನ್ನು ಕೊಡಬೇಕು. ಇಲ್ಲ, ನಮಗೆ ಅದರ ಕಾಪಿ ಕೊಡಬೇಕು. ಹಾಗೇ, abrupt ಆಗಿ ಮಾಡುವುದುಕ್ಕೆ ಬರುವುದಿಲ್ಲ.

ಶ್ರೀ ಧರ್ಮಸಿಂಗ್ : ನಿಯಮ ೧೪೬ರಲ್ಲಿ 7 days ಮೊದಲೇ ಕೊಡಬೇಕೆಂದು ಇರುವುದು ನಮಗೆ ಗೊತ್ತಿದೆ. ಈ ಸದನ ೫ನೇ ತಾರೀಖಿನವರೆಗೆ ನಡೆಯುತ್ತದೆ. ಅದಕ್ಕೆ ನಾವೇನು ಮಾಡಿದ್ದೇವೆಂದರೆ, ಅದಕ್ಕೆ ಮುಂಚೆ ಇದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿದೆ. Supreme Court ತೀರ್ಪಿನ ಮೇಲೆ ಬಹಳಷ್ಟು ವಿಧಾನಸಭೆಗಳಲ್ಲಿ ಈ ತರಹದ resolution pass ಮಾಡಿದ್ದಾರೆ. ಈ ದೇಶದ ಶೋಷಿತ, ಹಿಂದುಳಿದವರ, ಅಲ್ಪಸಂಖ್ಯಾತರ, ಬೇರೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕೂಡ ಒಂದು ಶಂಕೆ ಮೂಡಿದೆ. ಇದು ದೊಡ್ಡ ವಿಷಯ. ತಾವು ದೊಡ್ಡ ಮನಸ್ಸು ಮಾಡಿ. ನಾವು resolution move ಮಾಡುತ್ತೇವೆ. ಇದನ್ನು adopt ಮಾಡೋಣ. ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಕೇಂದ್ರ ಸರ್ಕಾರದ ಕೈಬಲಪಡಿಸಿದ ಹಾಗಾಗುತ್ತದೆ. ಈಗಾಗೇ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇವತ್ತು Human Resources Minister ಹೇಳಿದ್ದಾರೆ. ರಾಷ್ಟ್ರ ಮಟ್ಟದ ನಾಯಕರೂ ಕೂಡ ಹೇಳಿದ್ದಾರೆ. ಪ್ರಕಾಶ್ ಕಾರಟ್ ರವರೂ ಹೇಳಿದ್ದಾರೆ. ದೇಶದ ಬಗ್ಗೆ ಚಿಂತನೆ ಮಾಡುವ ಎಲ್ಲ ವ್ಯಕ್ತಿಗಳು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸದನ ೫ ನೇ ತಾರೀಖು ಮುಗಿಯುವ ರೀತಿಯಲ್ಲಿದೆ. ಅದಕ್ಕೆ ನಾವು ತರಾತುರಿಯಲ್ಲಿ

ಎಲ್ಲವನ್ನೂ ಬದಿಗಿಟ್ಟು ತಾವು ನಿಯಮಾವಳಿಗಳನ್ನು ನೋಡಲಾರದೇ ಪ್ರಶ್ನೋತ್ತರ ಸಮಯದ ಮೊದಲೇ ನಾವು ಇದನ್ನು ತಂದಿದ್ದೇವೆ. ಈ resolution move ಮಾಡುತ್ತೇವೆ. ಇದನ್ನು adopt ಮಾಡೋಣ. ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಕೊಟ್ಟರೆ ಕೇಂದ್ರ ಸರ್ಕಾರದ ಕೈಬಲಪಡಿಸಿದ ಹಾಗಾಗುತ್ತದೆ. ಈಗಾಗಲೇ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇವತ್ತು Human Resources Minister ಹೇಳಿದ್ದಾರೆ. ರಾಷ್ಟ್ರ ಮಟ್ಟದ ನಾಯಕರೂ ಕೂಡ ಹೇಳಿದ್ದಾರೆ. ಪ್ರಕಾಶ್ ಕಾರಟ್‌ರವರೂ ಹೇಳಿದ್ದಾರೆ. ದೇಶದ ಬಗ್ಗೆ ಚಿಂತನೆ ಮಾಡುವ ಎಲ್ಲ ವ್ಯಕ್ತಿಗಳು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸದನ ಶಿನೇ ತಾರೀಖು ಮುಗಿಯುವ ರೀತಿಯಲ್ಲಿದೆ. ಅದಕ್ಕೆ ನಾವು ತರಾತುರಿಯಲ್ಲಿ ಎಲ್ಲವನ್ನೂ ಬದಿಗಿಟ್ಟು ತಾವು ನಿಯಮಾವಳಿಗಳನ್ನು ನೋಡಲಾರದೇ ಪ್ರಶ್ನೋತ್ತರ ಸಮಯದ ಮೊದಲೇ ನಾವು ಇದನ್ನು ತಂದಿದ್ದೇವೆ. ಈ resolution move ಮಾಡುತ್ತಿದ್ದೇವೆ. ಈ resolution ಬಗ್ಗೆ ಎಲ್ಲರೂ ಒಪ್ಪಿಗೆ ಕೊಟ್ಟು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು.

(ಗೊಂದಲ)

ಶ್ರೀ ನೆ.ಲ. ನರೇಂದ್ರ ಬಾಬು : Other Backward Classes ಬಗ್ಗೆ ಎಲ್ಲರಿಗೂ ಆಸಕ್ತಿ ಇದೆ. (ಗೊಂದಲ) ಇದು ಮರಣ ಶಾಸನ.

ಶ್ರೀ ಎಂ.ಪಿ.ಪ್ರಕಾಶ್ : ಅದು ಷರತ್ತಿಗೊಳಪಟ್ಟಿರತಕ್ಕಂಥ ಗೊತ್ತುವಳಿ ಹೌದೇ, ಅಲ್ಲವೇ ಅನ್ನತಕ್ಕಂಥದ್ದನ್ನು ಮೊದಲು ತಾವು ಪರಾಂಬರಿಸಬೇಕಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಪರಾಂಬರಿಸಿ, ನೀವೇ ತೆಗೆದುಕೊಂಡು ಬನ್ನಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಮೀಸಲಾತಿ ವಿಷಯದಲ್ಲಿ ನಮ್ಮ ಒಪ್ಪಿಗೆ ಇದೆ. ಕಾಪಿ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ನಿರ್ಣಯವನ್ನು ನೀವೇ ಮಂಡಿಸುವುದಾದರೆ ಮಂಡಿಸಿ ಅಥವಾ ಅವರೇ ಮಂಡಿಸಲಿ.

(ಗೊಂದಲ)

ಅಧ್ಯಕ್ಷರು : ಈ ರೀತಿ ಚರ್ಚೆ ಹೋಗುವುದು ಸರಿಯಲ್ಲ. (ಗೊಂದಲ) ನಿಯಮ ೧೪೬ರ ಕೆಳಗೆ ಒಂದು ಸೂಚನೆಯನ್ನು ಈಗ ಕಳುಹಿಸಿದ್ದಾರೆ. ಆರಂಭವಾದ ಮೇಲೆ ಕಳುಹಿಸಿದ್ದಾರೆ. ಅದಕ್ಕೆ ಕೆಲವು ಷರತ್ತುಗಳಿವೆ. ಅವೆಲ್ಲವನ್ನು ನಾವು ನೋಡಬೇಕಾಗುತ್ತದೆ. ಆಮೇಲೆ, ನೀವು ಕೊಡಬೇಕು. ಅವೆಲ್ಲ ನೋಡಿ (ಗೊಂದಲ) ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳಬೇಕು ಏನು ಎಂದು ನೋಡುತ್ತೇನೆ.

ಡಾ॥ ಹೆಚ್. ಸಿ. ಮಹಾದೇವಪ್ಪ : ದಯವಿಟ್ಟು, ಇದನ್ನು ತೆಗೆದುಕೊಳ್ಳಿ.

ಶ್ರೀ ಧರ್ಮಸಿಂಗ್ : It is necessary to take up now.

ಅಧ್ಯಕ್ಷರು : ನೀವು ಸುಮ್ಮನೆ ಹೀಗೆ ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ಧರ್ಮಸಿಂಗ್ : ನಾವೇಕೆ ಇದನ್ನು ತರುತ್ತಿದ್ದೇವೆಂದರೆ, (ಗೊಂದಲ)

ಅಧ್ಯಕ್ಷರು : ನಿಯಮ ೧೪೬ರ ಕೆಳಗೆ ನೀವು ಸೂಚನೆ ಕೊಟ್ಟಿದ್ದೀರಿ. ಅದು ಇದಕ್ಕೆ ಅನ್ವಯವಾಗುವುದಿಲ್ಲ. (ಗೊಂದಲ) Parliamentary Affairs Minister ಏನು ಹೇಳಿದ್ದಾರೆಂದರೆ, ಅವರಿಗೆ ನೀವು notice ಕೊಡಬೇಕು. ಅದನ್ನೆಲ್ಲ ನೋಡಿ ನಾನು ಅವರನ್ನು ಕೇಳುತ್ತೇನೆ. ಅನಂತರ, ಅವಕಾಶ ಕೊಡಬಹುದೇ ಎನ್ನುವುದನ್ನು ಯೋಚನೆ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ : ಕರ್ನಾಟಕ ವಿಧಾನ ಮಂಡಲದಲ್ಲಿ ಕೂಡ ಈ resolution pass ಅದಂತೆ ಆಗುತ್ತದೆ. ಆ ಕೆಲಸವನ್ನು ಪ್ರಕಾಶ್‌ರವರು ಮಾಡಬೇಕು.

ಅಧ್ಯಕ್ಷರು : Resolution ಅನ್ನು ಈ ಸಭೆ ಮಾಡಬಾರದೆಂದು ನಾನು ಹೇಳುತ್ತಿಲ್ಲ. ಆದರೆ, at this stage, ಇದಕ್ಕಿದ್ದ ಹಾಗೆ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) : ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಆದರೆ ಅವರು ನಿಯಮಾನುಸಾರ ಇದನ್ನು ನಾಳೆ ತರಲಿ. ನಾಳೆ ಚರ್ಚೆ ಮಾಡೋಣ. ನಿಯಮಗಳನ್ನು ಬಿಟ್ಟು ಮಾಡುವುದಕ್ಕಾಗುತ್ತದೆಯೇ?

ಶ್ರೀ ಸಿದ್ದರಾಮಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಮಹತ್ವದ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಣಯ ಮಂಡಿಸಿದ್ದಾರೆ. notice ಕೂಡ ಕೊಟ್ಟಿದ್ದಾರೆ. ಪ್ರಕಾಶ್‌ರವರು, ನಿಯಮಾವಳಿಗಳ ರೀತ್ಯಾ ಬಂದಿಲ್ಲವೆನ್ನುತ್ತಾರೆ. ೭ ದಿನಗಳ ಮುಂಚೆ notice ಕೊಡಬೇಕು, ಅದನ್ನು ನೋಡಬೇಕು. Resolution ಒಪ್ಪಬೇಕು, ಅದು ನಿಯಮಾವಳಿಗಳ ರೀತ್ಯಾ ಇದೆಯೋ, ಇಲ್ಲವೋ ನೋಡಬೇಕೆಂದು ಹೇಳುತ್ತಾರೆ. ಇದು ಹಿಂದುಳಿದ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಮಹತ್ವದ ವಿಷಯ. ಕಳೆದ ಮಾರ್ಚ್ ೨೯ರಂದು Supreme Court ನಿಂದ ಒಂದು ತೀರ್ಪು ಹೊರ ಬಂದಿದೆ. ಕೇಂದ್ರ ಸರ್ಕಾರ ಅರ್ಜುನ್ ಸಿಂಗ್‌ರವರ ನೇತೃತ್ವದಲ್ಲಿ ಇತ್ತೀಚೆಗೆ ೯೩ amendment ತಂದರು. ಅದರ ಪ್ರಕಾರ, IIM, IISc ಈ ತರಹದ institutions ಗಳಲ್ಲಿ ರಾಜ್ಯಾಂಗ ಬಂದಂದಿನಿಂದ ಇವತ್ತಿನವರೆಗೆ ಮೀಸಲಾತಿ ಕೊಟ್ಟಿಲ್ಲ. ಇದರಿಂದ ಹಿಂದುಳಿದ ಜಾತಿಯವರಿಗೆ ದೊಡ್ಡ ಅನ್ಯಾಯವಾಗಿದೆ. ಈಗ ಕೇಂದ್ರ ಸರ್ಕಾರದಲ್ಲಿರುವ UPA ಸರ್ಕಾರ ಸರ್ಕಾರ ಇವರಿಗೆ ಮೀಸಲಾತಿ ಕೊಡಬೇಕೆಂದು ಇತ್ತೀಚೆಗೆ ಕಾನೂನು ಕೂಡ ಮಾಡಿ, ಆ ಕಾನೂನನ್ನು challenge ಮಾಡಿದ್ದಾರೆ. ಈ ವರ್ಷದಿಂದ ಮಾಡಬೇಕಾಗಿತ್ತು, ಅದನ್ನು stay ಮಾಡಿದ್ದಾರೆ. ಇಂಥ ಒಂದು ಮಹತ್ವದ ವಿಚಾರದ ಬಗ್ಗೆ ನಾವಿಲ್ಲಿ ಚರ್ಚೆ ಮಾಡದೇ ಇನ್ನೆಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆ? ಇಲ್ಲಿಯೇ ಚರ್ಚೆ ಮಾಡಬೇಕಾಗುತ್ತದೆ. ಇದು ಅತ್ಯಂತ ಮಹತ್ವದ ವಿಚಾರವಾದ್ದರಿಂದ ನಿರ್ಣಯದಲ್ಲಿರುವ ಸಣ್ಣಪುಟ್ಟ ಅವು ಸರಿಯಿಲ್ಲ, ಇವು ಸರಿಯಿಲ್ಲ, ನಿಯಮಾವಳಿಗಳ ಒಳಗಡೆ ಇರುವುದಿಲ್ಲವೆಂದು ಹೇಳುವುದು ಬೇರೆ ವಿಚಾರ. ಅವೆಲ್ಲ technical objections. But, the question is, ಮಂಡಲ್ ಕಮಿಷನ್ ರಿಪೋರ್ಟ್ ಪ್ರಕಾರ ದೇಶದ ಹಿಂದುಳಿದ ಎಲ್ಲಾ ಜಾತಿಯವರು ನೂರಕ್ಕೆ ೫೨% ಇದ್ದಾರೆ. ಇದು ಆ ಹಿಂದುಳಿದ ಜಾತಿಯವರಿಗೆ ಸಂಬಂಧಪಟ್ಟಂಥ ವಿಚಾರ. ಆದ್ದರಿಂದ, ಆ ಬಗ್ಗೆ ನಾವು ಇಲ್ಲಿ resolution ಮಾಡಿ ಕೇಂದ್ರ ಸರ್ಕಾರದ ಮೇಲೆ ಒತ್ತಡ

ಹಾಕತಕ್ಕಂಥದ್ದು ಇದಕ್ಕೆ ಬೇಕಾದಂಥ ಎಲ್ಲಾ ವಿಷಯಗಳನ್ನು Supreme Court ಮುಂದೆ ವಾದ ಮಾಡಬೇಕು, ಕಾನೂನು ಬದಲಾವಣೆ ಮಾಡಬೇಕಾದರೆ ಮಾಡಬೇಕಾಗುತ್ತದೆ, Constitution ಬದಲಾವಣೆ ಮಾಡಬೇಕಾದರೆ ಮಾಡಬೇಕಾಗುತ್ತದೆ. ಇದನ್ನು vacate ಮಾಡಿಸಲು ಯೋಚಿಸಬೇಕಾಗುತ್ತದೆ. ಏಕೆಂದರೆ ಈ ವರ್ಷದಿಂದ admission ಪ್ರಾರಂಭವಾಗಬೇಕು. ಎಲ್ಲಾ ಹಿಂದುಳಿದ ಜಾತಿಯವರಿಗೆ ೨೦೦೭–೦೮ ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಅಡ್ಮಿಷನ್ ಪ್ರಾರಂಭ ಆಗಬೇಕು. ಒಂದು ವೇಳೆ ಸ್ಟೇ ವೆಕೇಟ್ ಆಗದೇ ಹೋದರೆ ಅವರಿಗೆ ಅಡ್ಮಿಷನ್ ಸಿಕ್ಕುವುದಿಲ್ಲ. ಪಾಪ ಆ ವಿದ್ಯಾರ್ಥಿಗಳು ಅನ್ಯಾಯಕ್ಕೆ ಒಳಗಾಗುತ್ತಾರೆ. ಇದೆಲ್ಲಾ ವಿವರವಾಗಿ ಚರ್ಚೆಯಾಗಬೇಕು. ಅದಕ್ಕೆ ತಾವು ದಯಮಾಡಿ ಅವಕಾಶ ಮಾಡಿ ಕೊಡಬೇಕು. ಅದು ಸರಿಯಿಲ್ಲವೆಂದರೆ ನೀವೇ resolution ತೆಗೆದುಕೊಂಡು ಬನ್ನಿ.

ಶ್ರೀ ಡಿ.ಟಿ. ಜಯಕುಮಾರ್ : ಕೇಂದ್ರ ಸರ್ಕಾರದ ಮೇಲೆ ಒತ್ತಡ ತೆಗೆದುಕೊಂಡು ಬನ್ನಿ. ಇದು ಮಹತ್ವದ ವಿಚಾರ ನಿಯಮಾವಳಿಯಲ್ಲಿ ನೋಡಿ ಚರ್ಚೆಮಾಡಿ.

ಶ್ರೀ ಸಿದ್ದರಾಮಯ್ಯ : ನೀವು ಆಮೇಲೆ ಮಾತನಾಡಿ. ಕೇಂದ್ರ ಸರ್ಕಾರದ ಕೈ ಬಲಪಡಿಸಲಿಕ್ಕೆ ನಾವು ಮಾಡಬೇಕು. ಈಗ ತಮಿಳುನಾಡು ಸರ್ಕಾರ ಮಾಡಿದೆ. ಆಂಧ್ರ ಸರ್ಕಾರ ಮಾಡಿದೆ. ತಮಿಳುನಾಡಿನವರು ಕೂಡ ಸರ್ಕಾರದಲ್ಲಿ ಪಾಲುದಾರರಾಗಿದ್ದಾರೆ. ಆಂಧ್ರದವರು ಕೂಡ ಇದ್ದಾರೆ. ಆದ್ದರಿಂದ ಏಕೆ resolution ಮಾಡಬೇಕಾಗುತ್ತದೆಂದರೆ, ಕೇಂದ್ರ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಶಕ್ತಿ ಕೊಡುವುದಕ್ಕಾಗಿ ಮಾಡಬೇಕಾಗುತ್ತದೆ. ಅವರು ಇನ್ನು ಹೆಚ್ಚು expedite ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೋಸ್ಕರವಾಗಿ, ಜನರ ಅಭಿಪ್ರಾಯ ರಾಜ್ಯದಲ್ಲಿ ಈ ರೀತಿ ಇದೆ ಎಂದು ಈ ಸದನದ ಮೂಲಕ ನಮ್ಮ ರಾಜ್ಯದ ಅಭಿಪ್ರಾಯವನ್ನು ವ್ಯಕ್ತ ಮಾಡಲಿಕ್ಕಾಗಿ ಮಾಡಬೇಕಾಗಿದೆ. ಆದ್ದರಿಂದ ಅವರು ಇದನ್ನು ವಿರೋಧಿಸಬೇಕಾದ ಅಗತ್ಯವಿಲ್ಲ. ಹಿಂದುಳಿದ ಜಾತಿಯವರ ಹಿತಕ್ಕೋಸ್ಕರ ಮಂಡಿಸಿರತಕ್ಕಂತ ನಿರ್ಣಯ. ಇದಕ್ಕೆ ತಾವು ಒಪ್ಪಿಗೆ ಕೊಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು) ಬಹಳ ಮಹತ್ವದ ವಿಷಯ ಎನ್ನುವುದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಕರ್ನಾಟಕ ರಾಜ್ಯ ಬಹಳ ವರ್ಷಗಳಿಂದಲೂ ಕೂಡ ಯಾವುದೇ ಪಕ್ಷದ ಅಧಿಕಾರ ಇದ್ದರೂ ಕೂಡ ರಾಜಕೀಯ

ಬದ್ದತೆ ಇದೆ. ಯಾರೂ ಅವಕಾಶದಿಂದ ವಂಚಿತರು ಆಗಿದ್ದಾರೆ, ಧ್ವನಿ ಕಳೆದುಕೊಂಡಿರತಕ್ಕಂಥ ಸಮುದಾಯದ ಪರವಾಗಿ ಶೇಕಡ ೨೭ರಷ್ಟು ಅವರಿಗೆ ಮೀಸಲಾತಿ ಕೊಡಬೇಕಾಗಿದೆ. ಎನ್ನುವಂಥದ್ದು ಏನಿದೆ ಇದು ಅನೂಚಾನವಾಗಿ ನಡೆದುಕೊಂಡು ಬಂದಿರತಕ್ಕಂಥದ್ದು. ಹಾಗೆ ನೋಡುವುದಾದರೆ, ನನ್ನ ಅಧ್ಯಕ್ಷತೆಯಲ್ಲಿ ನಡೆದಂತ ಒಂದು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಮಾನ್ಯ ಸಿದ್ದರಾಮಯ್ಯನವರು ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮಾನ್ಯ ಜಾಲಪ್ಪರವರು ಇದ್ದರು. ಆಗ ನಮ್ಮ ರಾಜಕೀಯ ಪ್ರಾತಿನಿಧ್ಯವನ್ನು ಕೂಡ ಶೇಕಡ ೨೭ಷ್ಟು ಅವರಿಗೆ ಕೊಡಬೇಕೆಂದು ಆ ಪ್ರವರ್ಗವನ್ನು ಮಾಡಿದೆವು, ಬಿ ಪ್ರವರ್ಗ ವನ್ನು ಮಾಡಿದೆವು. ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ಏನೆಂದರೆ, ಈ ಬಗ್ಗೆ ಸರಕಾರದ ಯಾವುದೇ ಆಕ್ಷೇಪಣೆಗಳಿಲ್ಲ. ಸೌಜನ್ಯದ ಮಾತಾಗಿ ಒಂದು ಮಾತನ್ನು ಹೇಳುತ್ತೇನೆ. ಯಾರೂ ಕೂಡ ಅನ್ಯಥಾ ಭಾವಿಸಬಾರದು. ಇಂಥ ಮಹತ್ಯದ ನಿರ್ಣಯವನ್ನು ಇಡೀ ಸದನ ಸಂಪೂರ್ಣವಾದಂಥ ಸರ್ವಸಮ್ಮತವಾದಂಥ ರೀತಿಯಲ್ಲಿ ನಿರ್ಣಯವಾದರೆ ಅದಕ್ಕೆ ಬೆಲೆ ಬರುತ್ತದೆ. ತಾವು ಆ ಮಾತನ್ನು ನನಗಾಗಲಿ ಅಥವಾ ಮುಖ್ಯಮಂತ್ರಿಗಳಿಗಾಗಲಿ, ಇನ್ಯಾರ ಜೊತೆಗಾಗಲಿ ಮಾತನಾಡಲಿ ಅಲ್ಲಿರುವಂಥ ವಿವಿಧ ಪಕ್ಷದ ಮುಖಂಡರುಗಳ ಜೊತೆ ಮಾತನಾಡಿ, ಇಲ್ಲಿ one up man ship ಎನ್ನತಕ್ಕಂಥದ್ದು ಆಗಲಾರದಂತೆ ನಾವೆಲ್ಲರೂ ಕಲೆತು ಇಂಥ ಒಂದು ಗೊತ್ತುವಳಿಯನ್ನು ರಚನೆ ಮಾಡೋಣವೆಂದು ಹೇಳುವುದಾದರೆ ಖಂಡಿತವಾಗಿಯೂ ಮಾಡಬಹುದಾಗಿತ್ತು. ಈಗ ತರುತ್ತೇನೆ. ಅದಕ್ಕೇ ನಾನು ಸೌಜನ್ಯದ ಮಾತು ಎಂದು ಹೇಳಿದೆ, ನಿಮ್ಮ ಅಧಿಕಾರದ ಮಾತು ಎಂದು ಹೇಳಲಿಲ್ಲ. ಆದ್ದರಿಂದ ಇದನ್ನು ತಂದಿದ್ದರೆ ಇದಕ್ಕೆ ಪ್ರಾಯಶಃ ಯಾವುದೇ ವಿರೋಧ ವ್ಯಕ್ತವಾಗುತ್ತಿರಲಿಲ್ಲ. ಇದು ಮಹತ್ವವಾಗಿರತಕ್ಕಂಥ ವಿಚಾರ. ಮಂತ್ರಿಯಲ್ಲದವರು ಯಾರೋ ಒಬ್ಬರು ಮಾಡಬೇಕಾದರೆ ಈ ನಿಯಮಾವಳಿಗಳು ಅಡ್ಡ ಬರುತ್ತವೆ. ಜೊತೆಗೆ ಪ್ರತಿ ಶುಕ್ರವಾರ ಖಾಸಗಿ ನಿರ್ಣಯವನ್ನು ತರಬೇಕು ಎಂದು ಇಲ್ಲಿಯವರೆಗೂ ಮಾಡಿಕೊಂಡು ಬಂದಿರುವಂಥ ಸಂಪ್ರದಾಯ ಒಂದೇ ಅಲ್ಲ, ಅದು ನಿರ್ಣಯವೂ ಕೂಡ ಆಗಿದೆ. ಪ್ರತಿ ಶುಕ್ರವಾರ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ನಾವು overcome ಮಾಡಬೇಕಾಗಿದ್ದರೆ, ಈಗ ನಾವು ಸರ್ಕಾರದವರೇ, ನಿಮ್ಮೆಲ್ಲರ ಒಪ್ಪಿಗೆ ತೆಗೆದುಕೊಂಡು, ತಾವೇನು resolution ಮಾಡಿದ್ದೀರಿ, ಇದು ಷರತ್ತಿಗೆ ಒಳಪಟ್ಟಿರತಕ್ಕಂಥ ರೀತಿಯಲ್ಲಿದೆ. ಬಹಳ ಮಹತ್ವವಾದಂಥ ವಿಚಾರವೂ ಇದೆ. ನಾವೆಲ್ಲರೂ ಕೂಡ ಚರ್ಚೆಯಲ್ಲಿ ಪಾಲ್ಗೊಂಡು ಇದರ ಮೇಲೆ ಬೆಳಕನ್ನು ಚೆಲ್ಲುವಂಥ ಅಗತ್ಯವಿದೆ. ಆ

ಕಾರಣಕ್ಕಾಗಿಯೇ ಇದನ್ನು ತಾವು ಮಂಡನೆ ಮಾಡುವ ಬದಲು, ಸರ್ಕಾರದ ವತಿಯಿಂದ ಇದನ್ನು ಮಂಡನೆ ಮಾಡುವುದಕ್ಕೆ ತಾವು ಒಪ್ಪಿಗೆಯನ್ನು ಕೊಡಿ. ತಾವು ಅದಕ್ಕಾಗಿ ಒಂದು ಸಮಯವನ್ನು ನಿಗದಿಪಡಿಸಿ. ನಿಗದಿಪಡಿಸುವುದೆಂದರೆ ಈಗ ಪ್ರಶ್ನೋತ್ತರವಿದೆಯೋ ಇನ್ಯಾವುದಿದೆಯೋ ಗೊತ್ತಿಲ್ಲ. ಅದನ್ನು ನೋಡಿ ತಾವು ಸಮಯ ನಿಗದಿಪಡಿಸಿದರೆ ಸರ್ಕಾರದ ದತ್ತಿಯಿಂದ ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಈ ಒಂದು ಗೊತ್ತುವಳಿಯನ್ನು ತರಬಹುದಾಗಿದೆ. ಇಲ್ಲದಿದ್ದರೆ ಇದು ಖಾಸಗಿ ನಿರ್ಣಯವಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : Larger perspective ನಿಂದ ಸರ್ಕಾರದಿಂದ ಮಾಡುವುದು ಅವಶ್ಯಕತೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಹೇಳುವುದರಲ್ಲಿ ಸತ್ಯವಿದೆ. ನಾವೇನು deny ಮಾಡುವುದಿಲ್ಲ. ಅದಕ್ಕೆ unanimously ತರತಕ್ಕಂಥದ್ದು ಬಹಳ ಅವಶ್ಯವಿದೆ. ಮತ್ತು ಸರ್ವಾನುಮತದಿಂದ pass ಆಗತಕ್ಕಂಥದ್ದು ಬಹಳ ಮುಖ್ಯ. ಏಕೆಂದರೆ ತರಾತುರಿಯಲ್ಲಿ ನಾವು ಇದನ್ನು ತಂದಿರುವುದರಿಂದ ಶಹಬಾಷಗಿರಿ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಇದಕ್ಕೆ ಎಲ್ಲರ support ಇದ್ದಾಗ ಮಾತ್ರ ಹೆಚ್ಚಿನ ತೂಕ ಮತ್ತು ಬೆಲೆ ಬರುತ್ತದೆ. ಅದನ್ನು ನೀವೇ ತೆಗೆದುಕೊಂಡು ಬನ್ನಿ. ನಾವು ಮಾಡುತ್ತೇವೆ. ನಾಳೆ ಬೇಕಾದರೆ ತಾವು ಇದನ್ನು ಪ್ರಸ್ತಾಪಿಸಿ. ನಿಮ್ಮದೇ ಶಬ್ಧದಲ್ಲಿ, ನೀವೇ ತೆಗೆದುಕೊಂಡು ಬನ್ನಿ. ನಾವು welcome ಮಾಡುತ್ತೇವೆ. ಇಲ್ಲಿ ಏನಾಗುತ್ತದೆಂದರೆ ನಾವು ಹೆಚ್ಚಿನ ಸಮಯವನ್ನು ತೆಗೆದುಕೊಂಡೆರೆ ಇಡೀ ದೇಶದಲ್ಲಿ ಎಲ್ಲಾ ಕಡೆಯಿಂದ ಹೋದಮೇಲೆ ನಮ್ಮ ಮನೆಯಿಂದ ಹೋಗುವುದಕ್ಕಿಂತಲೂ ತಕ್ಷಣ ತಂದರೆ ಒಳ್ಳೆಯದು. Delay ಆಗಬಾರದು ಎನ್ನುವ ಉದ್ದೇಶದಿಂದ ಮಂಡಿಸಿದ್ದೇವೆಯೇ ಹೊರತು, ಒಂದು ನಾವೇ ಮಂಡಿಸಬೇಕೆನ್ನುವ ಹಟ ಇಲ್ಲ, ಛಲವೂ ಇಲ್ಲ. ನೀವೂ ನಾವೂ ಕೂಡಿ ಸಾರ್ವಜನಿಕರಿಗೆ ಏನು ಒಳ್ಳೆಯದು ಮಾಡಬೇಕು ಅದನ್ನು ಮಾಡೋಣ. ದಯವಿಟ್ಟು ನಾಳೆ ತೆಗೆದುಕೊಂಡು ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರು ಹೇಳಿದ ಮಾತನ್ನು ಭಾಗಶಃ ನಾನು ಒಪ್ಪುತ್ತೇನೆ. ಎಲ್ಲರೆ ಜೊತೆಯಲ್ಲಿ ಮಾತನಾಡಿ ಇದನ್ನು ತೆಗೆದುಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನಾನೂ ಒಪ್ಪುತ್ತೇನೆ. ಈಗ ತರಾತುರಿಯಲ್ಲಿ ತಂದಿರುವುದು ತಪ್ಪೇನಿಲ್ಲ. ಆದರೂ ಇದರ ಮಹತ್ವದ ಬಗ್ಗೆ ನಾವು ಬೇರೆ ದಿಕ್ಕನ್ನು ತಲುಪುವ ಬದಲು, ಮಾನ್ಯ ಅಧ್ಯಕ್ಷರಲ್ಲಿ ನನ್ನ ವಿನಂತಿಯೇನೆಂದರೆ

ಸಾಧ್ಯವಾದರೆ ಸಭೆಯನ್ನು ಅರ್ಧ ಗಂಟೆಗಳ ಕಾಲ ಮುಂದಕ್ಕೆ ಹಾಕಿ ತಕ್ಷಣ ಚರ್ಚೆ ಮಾಡಿ ಯಾವ ರೀತಿ ನಿರ್ಣಯ ಮಾಡಬೇಕೆಂದು ತಾವು ತೀರ್ಮಾನ ಮಾಡಿಕೊಂಡು ಮಂಡಿಸಿಬಿಟ್ಟರೆ ಸರ್ವಾನುಮತದ ನಿರ್ಣಯವಾಗುತ್ತದೆ. ಇದು ಬಹಳ ಪ್ರಾಮುಖ್ಯ. ಇದನ್ನು ಮಾಡಲೇಬೇಕಾಗಿದೆ. ಇದನ್ನು ಬಿಟ್ಟು ಬೇರೆ ಇಲ್ಲಿ ನಡೆಯುತ್ತಿದ್ದರೆ, ಅದು ಸರಿ ಕಾಣುವುದಿಲ್ಲ. ಪ್ರಮುಖವಾಗಿ ಇದನ್ನು ಮಾಡಲೇಬೇಕು. ಒಂದು ಕಡೆ ಸರ್ವೋಚ್ಚ ನ್ಯಾಯಾಲಯ, ಮತ್ತೊಂದು ಕಡೆ ಕೇಂದ್ರ ಸರ್ಕಾರ, ಈಗ ಗೊಂದಲದಲ್ಲಿದ್ದಾರೆ. ಆದ್ದರಿಂದ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಹಿತದೃಷ್ಟಿಯಿಂದ ನಾವೆಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರತಕ್ಕಂಥದ್ದು ಒಳ್ಳೆಯದು.

ಶ್ರೀ ಜನದೀಶ್ ಶೆಟ್ಟರ್ : ಮಾನ್ಯ ವಾಟಾಳ್ ನಾಗರಾಜ್ ರವರೇ ಮಾನ್ಯ ಖರ್ಗೆಯವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಆ ಪ್ರಕಾರ ನಾಳೆಯೇ ಇದನ್ನು ತೆಗೆದುಕೊಂಡು ಬರೋಣ. ಈಗ business continue ಮಾಡೋಣ.

ಶ್ರೀ ಸಿದ್ಧರಾಮಯ್ಯ : ಈಗ ಐದು ನಿಮಿಷ adjourn ಮಾಡಿ ಈಗಲೇ ಮಾಡಿ, ಅಥವಾ immediately after the question hour ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : Question hour ಆದ ನಂತರ ಮಾಡೋಣವಂತೆ. ಇವತ್ತಾಗಲಿ, ನಾಳೆಯಾಗಲಿ, ಅವಕಾಶ ನೋಡಿಕೊಂಡು ಮಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಬಹಳ ಮಹತ್ವವಾದ ವಿಚಾರ ಎನ್ನುವ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲ. ನಾವು ನಿರ್ಣಯವನ್ನು pass ಮಾಡಲೇ ಬೇಕು. ಹಾಗಾಗಿ, ನೀವು ಸಮಯವನ್ನು ನಿಗದಿ ಮಾಡಿ. ಈಗ ಅರ್ಧ ಗಂಟೆ ಮುಂದೂಡಿ, ನಿಮ್ಮ ಜೊತೆ ನಾವು ಸರ್ಕಾರ ಎಲ್ಲಾ ಸೇರಿ ಚರ್ಚೆ ಮಾಡುವುದು. ಒಂದು time ನಿಗದಿ ಮಾಡುವುದು ಅಥವಾ ಮಾನ್ಯ ಪ್ರಕಾಶ್‌ರವರು ಸೂಚಿಸಿದಂತೆ ಅವರೇನು ತಿದ್ದುಪಡಿಯನ್ನು ತಂದರೂ ಸಹ ಸ್ವಾಗತವಿದೆ. ಈ But, ಈ ನಿರ್ಣಯ ಆಗಲೇ ಬೇಕು ಎನ್ನುವುದು ನಮ್ಮ ಒತ್ತಾಯ. ಇದು ಆಗಲೇ ಬೇಕು. ಇವತ್ತು ಸಮಯ ನಿಗದಿ ಮಾಡಿ, ಎಲ್ಲರ ಹತ್ತಿರ ಚರ್ಚೆ ಮಾಡಿ, ನೀವೇ ಸಮಯವನ್ನು ನಿಗದಿ ಮಾಡಿಸಿ. ಈ ನಿರ್ಣಯ pass ಆಗಬೇಕು. ಇದು ಬಹಳ ಮುಖ್ಯವಾದದ್ದು. ಈ ದೇಶದ ಸಾಮಾಜಿಕ ನ್ಯಾಯದ ಪ್ರಶ್ನೆ ಇದು.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮತ್ತು ಇತರೆ ಕಲಾಪಗಳು ಆಗಲಿ. ನಾನು ಎಲ್ಲಾ ಪಕ್ಷಗಳ ಮುಖಂಡರನ್ನು ಒಂದೂವರೆ ಗಂಟೆಗೆ ಕರೆಯಬಹುದು. ಆನಂತರ lunch.

ಶ್ರೀ ಧರ್ಮಸಿಂಗ್ : ಚರ್ಚೆ ಮಾಡಿ, ಅವರು ಯಾವಾಗ ಮಾಡುತ್ತಾರೋ ಮಾಡಲಿ.

ಅಧ್ಯಕ್ಷರು : ಒಂದೂವರೆ ಗಂಟೆಗೆ ಸಭೆ ಕರೆದು, ಅರ್ಧ ಗಂಟೆ ಚರ್ಚೆ ಮಾಡಿ ಅವರು ಯಾರ ಜೊತೆ ಸಮಾಲೋಚನೆ ಮಾಡಬೇಕೋ ಮಾಡಿಕೊಳ್ಳಲಿ.

ಶ್ರೀ ಧರ್ಮಸಿಂಗ್ : ಏಕೆಂದರೆ ಐದನೇ ತಾರೀಖಿನಂದು ಅಧಿವೇಶನ ಮುಗಿಯುತ್ತದೆ. ಅಷ್ಟರೊಳಗೆ ಆಗಬೇಕು.

ಅಧ್ಯಕ್ಷರು : ಸ್ವಲ್ಪ ಕೇಳಿ ಸ್ವಾಮಿ. ಒಂದೂವರೆ ಗಂಟೆಗೆ ನಾನು ಮುಖಂಡರ ಸಭೆಯನ್ನು ಕರೆಯುತ್ತೇನೆ. ಅದಾದ ನಂತರ lunch ಇದೆ. ಅದಾದನಂತರ ಅವರು ಒಂದು ನಿರ್ಣಯಕ್ಕೆ ಬರಲಿ. ನಾವು ಒಂದು ದಿನ ಸಮಯ ಗೊತ್ತು ಮಾಡಿ ಮಾಡೋಣ. ಈಗ ಒಂದು ಪ್ರಕಟಣೆ ಇದೆ.

೨. ಪ್ರಕಟಣೆ

ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡವರು ಅನಾರೋಗ್ಯದಿಂದ ವಿಶ್ರಾಂತಿ ಪಡೆಯುತ್ತಿರುವುದರಿಂದ ದಿನಾಂಕ ೧೪.೩.೨೦೦೭ರಿಂದ ೦೫.೦೪.೨೦೦೭ ರವರೆಗೆ ಸದನಕ್ಕೆ ಗೈರು ಹಾಜರಾಗಲು ಅವರು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ಮಾನ್ಯ ಸದಸ್ಯರು ಗೈರು ಹಾಜರಾಗಲು ಸದನದ ಸಹಮತಿಯಿದೆ ಎಂದು ಭಾವಿಸಲಾಗಿದೆ. ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ ರವರು ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

(ಗೊಂದಲ)

ಶ್ರೀ ಹೆಚ್.ಆಂಜನೇಯ : ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಅವಕಾಶ ಕೊಡಿ.